

ಗಂಗೆ ಕೂತರೂ ತಪ್ಪು ನಿಂತರೂ ತಪ್ಪು. ಆದರೆ, ಜನರ ಮುಂದೆ ಬಣ್ಣದ ಮಾತಿಗೇನೂ ಕಡಿಮೆಯಿಲ್ಲ. ಅದು ಆ ಊರಿನ ಎಲ್ಲರಿಗೂ ಗೊತ್ತಿರುವ ವಿಚಾರ.

ಗಂಗೆ ಶಾಸ್ತ್ರಕ್ಕೆ ಎನ್ನುವಂತೆ ಹಣಿ ಮಜ್ಜಿಗೆ ಕುಡಿದವಳು ಸೀದಾ ಅಡಿಗೆ ಚಪ್ಪರಕ್ಕೆ ಹೋದಳು. ಶಿವರಾಮ ಹೆಗಡೆಯ ಹೆಂಡತಿ ಪದ್ಮಾವತಿ ಬಂದು ಅಡಿಗೆ ಸಾಮಾನಿನ ವಿವರ ಕೊಡುತ್ತಾ ಜೀರಿಗೆ ಸಾಸಿವೆ, ಮೆಣಸಿನ ಡಬ್ಬಿಗಳನ್ನ ಒಂದೊಂದಾಗಿ ತೋರಿಸಿದಳು. 'ಗಂಗೂ ಅನ್ನ ಪಾಯ್ಸಕ್ಕೆ ಪರಮಣ್ಣಂಗೆ ಹೇಳಿದ್ದೆ, ಅದ್ರ ಬಗ್ಗೆ ಯಾವ ಚಿಂತಿಲ್ಲೆ. ನಿಂಗೆ ಕೈ ಕೆಲಸಕ್ಕೆ ನೀಲಕಣಿ ಬಾಗಿ, ಅದ್ರ ಮಗಳು ಮೀನಾಕ್ಷಿಗೆ ಕರಯ ಆಜು. ತರಕಾರಿ ಕೊಚ್ಚಿ, ಕಾಯ ಹೆರಸಿ ಯಲ್ಲ ಅವೆ ಮಾಡ್ತೊ.' ಎಂದಳು ಪದ್ಮಾವತಿ. ಗಂಗೆಗೆ ತಡೆಯಲಾಗಲಿಲ್ಲ. ಬಾಯಿಗೆ ಸೆರಗು ಅಡ್ಡ ಹಿಡಿದು ಪಿಸು ದನಿಯಲ್ಲಿ, 'ಯಂತೊ ಅಡ